ಅಧ್ಯಕ್ಷರು: ಕಾಗೇರಿಯವರೆ, ನಾಳೆ ಹಾಕಿಕೊಳ್ಳೋಣ ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಹಾಗೆಯೇ ಹೇಗೆ ಕಳುಹಿಸುವುದಕ್ಕೆ ಆಗುತ್ತದೆ? preliminary submission ಆದನಂತರ ತಾವು ಬೇಕಾದರೆ ನಿಯಮ 69ಕ್ಕೆ ಕನ್‌ವರ್ಟ್ ಮಾಡಿಕೊಡಿ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾಳೆ ಈ ವಿಷಯದ ಚರ್ಚೆಗೆ ಹಾಕಿಕೊಳ್ಳುತ್ತೇನೆಂದು ಹೇಳಿದ್ದೀರಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಒಂದು ಕಾನೂನು ಎಂದು ಮಾಡಲಾಗಿದೆ. ಸದನದ ಕಾರ್ಯಕಲಾಪ ಹೇಗೆ ನಡೆಯಬೇಕು ಎಂಬುದಕ್ಕೆ ಸಂಬಂಪಟ್ಟಂತೆ ಕಾನೂನು ಎಂದು ಮಾಡಲಾಗಿದೆ. ಆ ಕಾನೂನಿನ ಪ್ರಕಾರ ತಾವು ಕ್ರಮ ತೆಗೆದುಕೊಳ್ಳಿ. ನಾವು ನಿಲುವಳಿ ಸೂಚನೆ ಎಂದು ಕೊಟ್ಟ ನಂತರ ತಾವು preliminary submission ಗೆ ಅವಕಾಶವನ್ನು ಕೊಡಲೇಬೇಕು.

ಶ್ರೀ ವಿ.ಸುನಿಲ್ ಕುಮಾರ್: ಮಾನ್ಯ ಕಸ್ತೂರಿ ರಂಗನ್ ವರದಿ ಬಗ್ಗೆ ಎರಡೇ ನಿಮಿಷ ಮಾತನಾಡಲು ಅವಕಾಶವನ್ನು ಮಾಡಿಕೊಡಿ.

ಶ್ರೀ ವೈ.ಎಸ್.ವಿ.ದತ್ತಾ: ಮಾನ್ಯ ಅಧ್ಯಕ್ಷರೆ, ಮೊದಲು ನಮ್ಮ ಪಕ್ಷದ ನಾಯಕರು ಪ್ರಸ್ತಾಪ ಮಾಡಬೇಕೆಂದಿರುವ ವಿಷಯದಲ್ಲಿ ಮಾತನಾಡಲು ಅವಕಾಶ ಮಾಡಿಕೊಡಿ.

(ಈ ಹಂತದಲ್ಲಿ ಜೆ.ಡಿ.ಎಸ್. ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಧರಣಿ ನಿರತರಾದರು)

ಶ್ರೀ ವಿ.ಸುನಿಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಜೆ.ಡಿ.ಎಸ್. ಪಕ್ಷದವರು ಕಸ್ತೂರಿ ರಂಗನ್ ವರದಿ ಪರವಾಗಿದ್ದಾರೆಯೇ ಹೇಳಲಿ. ಈಗ ನಾವು ಕೇಳುತ್ತಿರುವುದು ಕೇವಲ ವಿಷಯ ಪ್ರಸ್ತಾಪ ಮಾಡಲು ಅವಕಾಶವನ್ನು